## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2375
ಸದಸ್ಯರ ಹೆಸರು : ಶ್ರೀ ಕೆ ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 22-03-2022
ಉತ್ತರಿಸುವ ಸಚಿವರು : ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಪೋಷಣಾ ಅಭಿಯಾನದಡಿ ಅಂಗನವಾಡಿ ಸಿಬ್ಬಂದಿಗಳಿಗೆ ವಿತರಿಸಲು ಉದ್ದೇಶಿಸಿರುವ ಸೀರೆ ಮತ್ತು ವಿನ್ಯಾಸಗಳ ಬಗ್ಗೆ ರಚಿಸಲಾದ ಸಮಿತಿ ಕೈಗೊಂಡ ನಿರ್ಣಯಗಳೇನು; (ಪ್ರತಿ ಒದಗಿಸುವುದು) | ಪೋಷಣ್ ಅಭಿಯಾನದಡಿ ಅಂಗನವಾಡಿ ಸಿಬ್ಬಂದಿಗಳಿಗೆ ವಿತರಿಸಲಾಗಿರುವ ಸೀರೆಗಳ ಖರೀದಿ ಕುರಿತಂತೆ ದಿನಾಂಕ:25.02.2021 ರಂದು ತಾಂತ್ರಿಕ ಸಲಹಾ ಸಮಿತಿ ಸಭೆ ನಡೆಸಲಾಗಿದ್ದು, ಸಭಾ ನಡವಳಿಯ ಪ್ರತಿಯನ್ನು ಲಗತ್ತಿಸಿದೆ. |
| ಆ. | ಸೀರೆ ವಿತರಣೆಗೂ ಮೊದಲು ಅಂಗನವಾಡಿ ಸದಸ್ಯರುಗಳ ಪ್ರಮುಖ ಸಲಹೆಗಳನ್ನು ಪಡೆಯಲಾಗಿತ್ತೇ; ಪಡೆದಿದ್ದಲ್ಲಿ, ಅವರ ಸಲಹೆಗಳೇನು; | ಕೇಂದ್ರ ಸರ್ಕಾರದ ದಿನಾಂಕ: 04/09/2020ರ ಮಾರ್ಗಸೂಚಿಯಗಳನ್ವಯ ಸಿಬ್ಬಂದಿಗಳಿಗೆ ಸೀರೆಗಳನ್ನು ಖರೀದಿಸಿ ವಿತರಿಸಬೇಕಾಗಿರುವುದರಿಂದ ಅಂಗನವಾಡಿ ಕಾರ್ಯಕರ್ತೆಯರುಗಳ ಸಲಹೆಗಳನ್ನು ಪಡೆದಿರುವುದಿಲ್ಲ. |
| ಇ. | ಈ ವಿಚಾರದಲ್ಲಿ ಸರ್ಕಾರ ಗಮನಹರಿಸಿ ಕೂಡಲೇ ಸಮಸ್ಯೆ ಬಗೆಹರಿಸುವುದೇ; | ಪೋಷಣ್ ಅಭಿಯಾನ ಯೋಜನೆಯಡಿ ವಿತರಿಸಿರುವ ಸೀರೆಗಳನ್ನು ಧರಿಸಲು ಅಂಗನವಾಡಿ ಕಾರ್ಯಕರ್ತರು ವಿರೋಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು ಈ ಬಗ್ಗೆ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ವಿವಿಧ ಸಂಘಗಳೊಂದಿಗೆ ಸಭೆ ನಡೆಸಿ ಸಮವಸ್ತ್ರದ ಕುರಿತಾಗಿ ಕೇಂದ್ರ ಸರ್ಕಾರವು ನೀಡಿರುವ ಮಾರ್ಗಸೂಚಿ ಮತ್ತು ಷರತ್ತುಗಳ ಬಗ್ಗೆ ತಿಳಿಸಲಾಗಿರುತ್ತದೆ.<br>ಪೋಷಣ್ ಅಭಿಯಾನ ಯೋಜನೆಯಡಿ ವಿತರಿಸಿರುವ ಸೀರೆಗಳು ಪ್ರತಿ ವರ್ಷ ಖರೀದಿಸಲಾಗುವ ಸಮವಸ್ತ್ರಗಳಾಗಿರುವುದಿಲ್ಲ.<br>ಪೋಷಣ್ ಅಭಿಯಾನದಡಿ ಪ್ರತೀ ಮಾಹೆ ಎರಡು ದಿವಸ ನಡೆಸಲಾಗುವ ಚಟುವಟಿಕೆಗಳಲ್ಲಿ ಮಾತ್ರ ಈ ಸೀರೆಗಳನ್ನು ಧರಿಸಬೇಕಾಗಿರುತ್ತದೆ. ಇಲಾಖೆಯು ಈಗಾಗಲೇ ಪ್ರತಿ ವರ್ಷ ವಿತರಿಸಲಾಗುವ ಸಮವಸ್ತ್ರದೊಂದಿಗೆ ವಿಶೇಷವಾಗಿ ಪೋಷಣ್ ಅಭಿಯಾನ ಚಟುವಟಿಕೆಗಳನ್ನು ಉತ್ತಮ ರೀತಿಯಲ್ಲಿ ಪ್ರಚಾರಗೊಳಿಸಲು ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ವಯ ಇದನ್ನು ಒಂದು ಬಾರಿಗೆ ಖರೀದಿಸಲಾಗಿರುತ್ತದೆ. |

| | | |
|---|---|---|
| ಈ. | ಪೋಷಣ ಅಭಿಯಾನದಡಿ ಅಂಗನವಾಡಿ ಕಾರ್ಯಕರ್ತೆರಿಗೆ ವಿತರಣೆ ಆಗಿರುವ ಸೀರೆಗಳ ಸಂಖ್ಯೆ ಎಷ್ಟು; ವ್ಯಯಿಸಲಾದ ಅನುದಾನ ಎಷ್ಟು? | 65911 ಅಂಗನವಾಡಿ ಕಾರ್ಯಕರ್ತೆಯರು ಮತ್ತು 62580 ಸಹಾಯಕಿಯರಿಗೆ ತಲಾ 2 ಸೀರೆಗಳಂತೆ ಒಟ್ಟು 256982 ಸೀರೆಗಳನ್ನು ವಿತರಿಸಲಾಗಿರುತ್ತದೆ.<br>ಒಂದು ಸೀರೆಗೆ ರೂ. 385.75/- ರಂತೆ ಸೀರೆ ಖರೀದಿಗೆ ಆಗಿರುವ ಒಟ್ಟು ಮೊತ್ತ, ರೂ.9,91,30,806.50/- ಗಳಾಗಿರುತ್ತದೆ. |

ಸಂ: ಮಮಇ 154 ಐಸಿಡಿ 2022

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

**ದಿನಾಂಕ:25-02-2021ರಂದು ಅಪರಾಹ್ನ 3.00 ಗಂಟೆಗೆ ಪೋಷಣ್ ಅಭಿಯಾನ ಯೋಜನೆಯಡಿ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಹೆಚ್ಚುವರಿಯಾಗಿ ಒಂದು ಜೊತೆ ಸಮವಸ್ತ್ರ/ಸೀರೆಯನ್ನು GeM portal ಮೂಲಕ ಖರೀದಿಸುವ ಕುರಿತು ನಡೆದ ಸಭೆಯ ನಡವಳಿಗಳು**

**ಸಭೆಯಲ್ಲಿ ಹಾಜರಿದ್ದವರ ಪಟ್ಟಿ ಲಗತ್ತಿಸಿದೆ.**

ದಿನಾಂಕ:25.02.2021ರಂದು ಪೋಷಣ್ ಅಭಿಯಾನ ಯೋಜನೆಯಡಿ ರಾಜ್ಯದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕಿಯರಿಗೆ ಹೆಚ್ಚುವರಿಯಾಗಿ ಒಂದು ಜೊತೆ ಸಮವಸ್ತ್ರ/ಸೀರೆಯನ್ನು GeM portal ಮೂಲಕ ಖರೀದಿಸಲು ರಚಿಸಿರುವ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರನ್ನು ಸ್ವಾಗತಿಸಿದರು.

ಸಮಿತಿ ಅಧ್ಯಕ್ಷರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪೋಷಣ್ ಅಭಿಯಾನದ ಪೋಷಣ್ ಮಾಸಾಚರಣೆ ಅಂಗವಾಗಿ ಕೇಂದ್ರ ಸರ್ಕಾರದ ಶೇಕಡ 100% ಅನುದಾನದಡಿ ಪ್ರತ್ಯೇಕವಾಗಿ ಬಿಡುಗಡೆ ಮಾಡಿರುವ ಅನುದಾನದಲ್ಲಿ ಖರೀದಿಗೆ ಸಂಬಂಧಿಸಿದ ವಿವರಗಳನ್ನು ಸಭೆಯಲ್ಲಿ ವಿವರಿಸಿದರು.

ಸಭೆಯಲ್ಲಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 65911 ಅಂಗನವಾಡಿ ಕಾರ್ಯಕರ್ತೆಯರಿಗೆ ಹಾಗೂ 62580 ಸಹಾಯಕಿಯರಿಗೆ ಹೆಚ್ಚುವರಿಯಾಗಿ ಒಂದು ಜೊತೆ ಸಮವಸ್ತ್ರ/ಸೀರೆಗಳನ್ನು ಪ್ರತಿಯೊಂದಕ್ಕೆ ರೂ.400/- ಯೂನಿಟ್ ಬೆಲೆಯಲ್ಲಿ ಖರೀದಿಗೆ ಸಂಬಂಧಿಸಿದ Specification ಹಾಗೂ ಸಂಬಂಧಪಟ್ಟ ವಿವರಣೆಗಳನ್ನು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.

- ಒಂದು ಜೊತೆ ಸಮವಸ್ತ್ರ/ಸೀರೆ ಖರೀದಿಸಲು ಈಗಾಗಲೇ ಭಾರತ ಸರ್ಕಾರವು ಪೋಷಣ್ ಅಭಿಯಾನ ಯೋಜನೆಯಡಿ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸುವುದು
- ಈಗಾಗಲೇ GeM portal ನಲ್ಲಿ ಪರಿಶೀಲಿಸಲಾಗಿದ್ದು, ರೂ.400/-ಗಳಲ್ಲಿ ಹ್ಯಾಂಡಲೂಮ್ ಸೀರೆಗಳು ಲಭ್ಯವಿರದ ಕಾರಣ ಹಾಗೂ ಸಮಯದ ಅಭಾವದಿಂದ ರೂ.400/-ಗಳಲ್ಲಿ ಲಭ್ಯವಿರುವ ಉತ್ತಮ ಗುಣಮಟ್ಟದ ಸೀರೆಗಳನ್ನು ಇಲಾಖೆಯು ಈಗಾಗಲೇ ಖರೀದಿಸಿರುವ ಈ ಕೆಳಗಿನ Specification ಗಳಂತೆ ಖರೀದಿಸಲು ತೀರ್ಮಾನಿಸಲಾಯಿತು.

**Item Description : Finished multicolour Saree with Blouse Piece – Dept. of Women and Child Development (DWCD), Govt. of Karnataka**

| Sl. No. | Specification Parameter | Technical Parameter | |
|---|---|---|---|
| | Description of item : finsihed Multicolour Saree with Blouse Piece - Dept. of Women and Child Development (DWCD), Govt. of Karnataka | | |
| 1 | Colour Fastness to washing (IS/ISO 105, C,10 c(3): 2006 (at 60 degree for 30 min) change in Color | 4 | |
| | Staining on:polyster/Cotton | 4-5/4-5 | |
| 2 | Colour Fastness to Rubbing (IS : 766:1988)(RA 2009) Staining on Dry (Warp/Weft) | 4-5/4-5 | |
| | Wet(Warp/Weft) | 4-5/4-5 | |
| 3 | Colour fastness to light Option 5 Xenon arc lamp Change in colour As per Grey Scale on AATCC Blue Wool Standard L4 After 20 AFU exposure | 4 | |
| 4 | C.F. to perspiration (IS:971:1983) R.A.2009 | ACID | ALKAI |
| | Change in colour | 4-5 | 4-5 |
| | Staining on:polyester/cotton | 4-5/4-5 | 4-5/4-5 |

| | | | |
|---|---|---|---|
| 5 | Weight (in gms) GSM | | 70 +/-10% |
| 6. | Count of Yarn | | |
| | | Warp(D) | 80 +/-10% |
| | | Weft(D) | 80+/-10% |
| 7 | Threads per inch | | |
| | | Warp(D) | 113+/-10% |
| | | Weft(D) | 72+/-10% |
| 8 | Fibre identification(IS:667:1981) (RA 2008) | | |
| | | Warp(D) | Polyester |
| | | Weft(D) | Polyester |
| 9 | Composition (%) | | |
| | Polyestr | | Warp-100%, Weft:100% |
| 10 | Tensile Strength (Kgs) IS: 1969:1985 (RA 2010)(5X20 CM2 Ravelled Strip) | | |
| | | Warp | 38+/-5 |
| | | Weft | 34+/-5 |
| 11 | Pliing Test (IS :109710 (Box pilling Method) (i.e. after 5 hours) (Average 18000 revolutions) Rating After 5 hours of test (Atlas Random Tumble pilling Tester) | | 4-5 |
| 12 | Classification of Dye On Polyester | | Disperse Dye |
| 13 | Weave | | Plain |
| 14 | Dimension in Cms) | Length with Blouse | 625 CM |
| | | Width | 113+/-2cm |
| 15 | Colour/Pattern/Print design | | As per buyer's requirement |
| 16 | Agree to provide Advance Sample(S) for buyer's approval before commencement of supply | | Yes |
| 17 | The supplier is required to print logo as per buyer's requirement | | Yes |

ಸಭೆಯಲ್ಲಿ ಮೇಲ್ಕಂಡ Specification ನಂತೆ ಖರೀದಿಸಲು ಅನುಮೋದನೆ ನೀಡಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಉಪ ನಿರ್ದೇಶಕರು,
ಕೈಮಗ್ಗ ಜವಳಿ ಇಲಾಖೆ, ನಂ. 86,
ಶುಭೋದಯ ಕಾಂಪ್ಲೆಕ್ಸ್, ರೈಲ್ವೆ
ಸಮಾನಾಂತರ ರಸ್ತೆ, ಕುಮಾರ
ಪಾರ್ಕ್ ಪಶ್ಚಿಮ, ಬೆಂಗಳೂರು

ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರ್ಕಾರಿ ಜವಳಿ ತಾಂತ್ರಿಕ ಸಂಸ್ಥೆ,
ಎಸ್.ಜೆ.ಪಿ. ಆವರಣ, ಕೆ.ಆರ್. ಸರ್ಕಲ್,
ಬೆಂಗಳೂರು.

ಜಂಟಿ ನಿರ್ದೇಶಕರು (ಐ.ಸಿ.ಡಿ.ಎಸ್),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.